ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 01-03-2017

## ಪತ್ರಿಕಾ ಆಮಂತ್ರಣ

1. **ರಾಜ್ಯದ ಬೀಳು ಭೂಮಿ ಸದ್ಬಳಕ್ಕೆ ಕುರಿತು ಒಂದು ದಿನದ ಕಾರ್ಯಾಗಾರ:**
**ದಿನಾಂಕ: 02–03–2017. ಬುಧವಾರ, ಬೆಳಿಗ್ಗೆ 11.00 ಗಂಟೆಗೆ**
**ಸ್ಥಳ: "ಸಮೃದ್ಧಿ ಸಭಾಂಗಣ", ಕೃಷಿ ಬೆಲೆ ಆಯೋಗದ ಕಚೇರಿ,**
**ಕೃಷಿ ನಿರ್ದೇಶನಾಲಯ ಆವರಣ, ನಂ, 1, ಶೇಷಾದ್ರಿ ರಸ್ತೆ,**
**ಬೆಂಗಳೂರು – 560 001.**

## ಪತ್ರಿಕಾ ಪ್ರಕಟಣೆ

## ಎಸ್.ಎಸ್.ಎಲ್.ಸಿ. ಪರೀಕ್ಷೆ – ಪೂರ್ವಸಿದ್ಧತೆಗಾಗಿ ಸಹಾಯವಾಣಿ

**ಬೆಂಗಳೂರು, ಮಾರ್ಚ್ 1 , (ಕರ್ನಾಟಕ ವಾರ್ತೆ)**

ಎಸ್.ಎಸ್.ಎಲ್.ಸಿ. ಪರೀಕ್ಷೆ ವಿದ್ಯಾರ್ಥಿ ಜೀವನದಲ್ಲಿ ನಿರ್ಣಾಯಕ ಹಂತದ ಪರೀಕ್ಷೆಯಾಗಿರುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಮಕ್ಕಳು ಗಳಿಸಬೇಕೆಂದು ಪೋಷಕರ ಅಭಿಲಾಷೆಯಾಗಿರುತ್ತದೆ. ವಿದ್ಯಾರ್ಥಿಗಳ ಸಾಮರ್ಥ್ಯ, ಬುದ್ಧಿಶಕ್ತಿ, ಆಸಕ್ತಿ, ಕ್ರಿಯಾಶೀಲನೆ, ಕಠಿಣ ಪರಿಶ್ರಮ ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಹೆಚ್ಚು ಅಂಕಗಳನ್ನು ಗಳಿಸಿ ಎಂದು ಅವರ ಮೇಲೆ ಒತ್ತಡವನ್ನು ಪೋಷಕರು, ಸಮಾಜ, ಶಿಕ್ಷಕರು ಹಾಕುತ್ತಿರುವುದು ಇತ್ತೀಚಿನ ಸಮಸ್ಯೆಯಾಗಿದೆ. ಇದರಿಂದ ವಿದ್ಯಾರ್ಥಿಗಳು ಅಧ್ಯಯನ ಕಡೆ ಗಮನಹರಿಸಲಾಗದಿರುವುದು. ಏಕಾಗ್ರತೆಯನ್ನು ಕಳೆದುಕೊಳ್ಳುತ್ತಿರುವುದು ಕಂಡು ಬಂದಿದ್ದು, ಈ ಸಮಸ್ಯೆ ನಿವಾರಣೆಯಾಗದೆ ವಿದ್ಯಾರ್ಥಿ ಪರೀಕ್ಷೆಯನ್ನು ಸಮರ್ಥವಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಈ ಸಮಸ್ಯೆಗಳ ನಿವಾರಣೆ ಮಾಡಿ, ಪರೀಕ್ಷೆಯನ್ನು ಸಮರ್ಥವಾಗಿ ಬರೆಯಲು ಸ್ಪೂರ್ತಿ ನೀಡಬೇಕಾದ ಅವಶ್ಯಕತೆ ಇದೆ.

ಈ ರೀತಿಯ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಕಂಡು ಹಿಡಿಯುವ ಹಾಗೂ ಭಯರಹಿತವಾಗಿ ಆತ್ಮಸ್ಥೈರ್ಯ (**Confidence**) ತುಂಬುವ ಸದುದ್ದೇಶದಿಂದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹಿಂದಿನ ವರ್ಷಗಳಂತೆ ಈ ವರ್ಷವೂ 'ಸಹಾಯವಾಣಿ' (**Helpline**) ಕೌನ್ಸಿಲಿಂಗ್ (**counseling**) ಕಾರ್ಯಕ್ರಮವನ್ನು ದಿನಾಂಕ: **01.03.2017** ಬುಧವಾರ ಬೆಳಿಗ್ಗೆ **9.00** ಗಂಟೆಗೆ ಉದ್ಘಾಟನೆಗೊಂಡಿದೆ. ದೂರವಾಣಿ ಸಂಖ್ಯೆ **080–23310075, 080–23310076.**

ಈ ಸಹಾಯವಾಣಿಯು ಮಾರ್ಚ್ **1** ರಿಂದ **28** ರವರೆಗೆ ಪ್ರತಿ ದಿನ ಬೆಳಿಗ್ಗೆ **9.00** ರಿಂದ ಸಂಜೆ **7.00** ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ. ಮಾರ್ಚ್ **30** ರಿಂದ ಏಪ್ರಿಲ್ **12** ರವರೆಗೆ ನಿಯಂತ್ರಣ ಕೊಠಡಿಯಾಗಿ ಬೆಳಿಗ್ಗೆ **9.00** ರಿಂದ ಮಧ್ಯಾಹ್ನ **2.30** ಗಂಟೆವರೆಗೆ ಮಾತ್ರ ಕಾರ್ಯನಿರ್ವಹಿಸಲಿದೆ.

ಪೋಷಕರು, ವಿದ್ಯಾರ್ಥಿಗಳು ಈ ದೂರವಾಣಿ ಸಂಖ್ಯೆಗೆ ಭಾನುವಾರ ಹಾಗೂ ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಂದು ಕರೆಮಾಡಿ ತಮ್ಮ ಸಮಸ್ಯೆಗಳಿಗೆ, ಸಂದೇಹಗಳಿಗೆ ಪರಿಹಾರ ಪಡೆದುಕೊಳ್ಳಬಹುದು. ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿಗಳು, ಪೋಷಕರು, ಈ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

<u>ಶೈಕ್ಷಣಿಕ ವಿಷಯ:</u>

ಅ. ಪರೀಕ್ಷೆಗೆ ಸಿದ್ದತೆ ಮಾಡಿಕೊಳ್ಳುವ ವಿಧಾನ.
ಆ. ಪ್ರಶ್ನೆ ಪತ್ರಿಕೆಯ ಮಾದರಿ,
ಇ. ಅಧ್ಯಯನ ಕೌಶಲ್ಯ (**Study skills**) ಇವುಗಳನ್ನು ಅಳವಡಿಸಿಕೊಳ್ಳುವ ವಿಧಾನ.

<u>ಪರೀಕ್ಷಾ ವಿಷಯ:</u>

ಅ. ಪರೀಕ್ಷಾ ಭೀತಿ (**Exam Fear**)
ಆ. ಸಮಯ ನಿರ್ವಹಣೆ (**Time management**),
ಇ. ಜ್ಞಾಪನಶಕ್ತಿ ಕಡಿಮೆ, ಮರೆವು ಎಂಬ ಭಾವನೆ, ನೆನಪಿನ ಶಕ್ತಿ ಉಳಿಸಿಕೊಳ್ಳುವ ವಿಧಾನ.
ಈ. ತಂದೆ ತಾಯಿಗಳ, ಸಮಾಜ, ಸ್ನೇಹಿತರ ಒತ್ತಡ (**Pressure**) ನಿರ್ವಹಣೆ.
ಉ) ಪರೀಕ್ಷೆ ಹತ್ತಿರವಾಗುತ್ತಿರುವ ವಿದ್ಯಾರ್ಥಿಗಳ ವರ್ತನೆಯ ಬದಲಾವಣೆಯಾಗುವುದು.
ಊ) ಇಷ್ಟವಿಲ್ಲದ ವಿಷಯಗಳನ್ನು ಓದಬೇಕಾದ ಅನಿವಾರ್ಯತೆ, ಒತ್ತಡ (**Pressure**) ಕೀಳರಿಮೆ ಇತ್ಯಾದಿ.

ಎಂಆರ್ಎಂ/ಜಿಪಿಆರ್